ಉ) ಕಾಲುವೆಗಳಲ್ಲಿನ ಅನಧಿಕೃತ ಪಂಪ್‌ಸೆಟ್‌ಗಳನ್ನು ತೆರವುಗೊಳಿಸುವುದನ್ನು ಕೊನೆ ಅಂಚಿನ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ನಿಜ

ಋ) ಪ್ರತಿ ದಿನ 10 ಕ್ಯೂಸೆಕ್ಸ್‌ಗಳಂತೆ ಮಳೆಗಾಲದ ಹಂಗಾಮಿನಲ್ಲಿ 150 ದಿನಗಳಿಗೆ ಒಟ್ಟು 0.13 ಟಿ.ಎಂ.ಸಿ ನೀರನ್ನು ಬಿಡಲಾಗುವುದು.

330 (878)ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ):– ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹ ಸಾಮರ್ಥ್ಯ ಎಷ್ಟು;

ಆ) ಹಾಲಿ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರು ಎಷ್ಟು;

ಇ) ಈ ಅಣೆಕಟ್ಟು ಪೂರ್ಣ ನಿರ್ಮಾಣಗೊಂಡಿದ್ದು ಯಾವಾಗ ಹಾಗೂ ಇದಕ್ಕಾಗಿ ಖರ್ಚಾಗಿರುವ ಮೊತ್ತವೆಷ್ಟು; ನಿರ್ಮಾಣದ ಅವಧಿಯೆಷ್ಟು ವರ್ಷ

ಈ) ಇದರ ಹಿನ್ನೀರು ಎಲ್ಲಿಯವರೆಗೆ ವ್ಯಾಪಿಸಿದೆ;

ಉ) ಜಲಾಶಯ ಭರ್ತಿಯಾಗಿರುವುದರಿಂದ ಇದನ್ನು ರಾಷ್ಟ್ರಕ್ಕೆ ಸಮರ್ಪಿಸಿಲ್ಲದಿರಲು ಕಾರಣಗಳೇನು;

ಊ) ಯಾವಾಗ ಸಮರ್ಪಿಸಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು):

ಅ) 123.08 ಟಿಎಂಸಿ

ಆ) ಹಾಲಿ ವರ್ಷದಲ್ಲಿ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರು 123.08 ಟಿಎಂಸಿ

ಇ) ಅಣೆಕಟ್ಟು ಪೂರ್ಣ ನಿರ್ಮಾಣಗೊಂಡಿದ್ದು, ಜೂನ್ 2001ರಲ್ಲಿ. ತಗುಲಿದ ವೆಚ್ಚ 258.86 ಕೋಟಿ ರೂಪಾಯಿ; ನಿರ್ಮಾಣದ ಅವಧಿ 30 ವರ್ಷಗಳು.

ಈ) ಜಲಾಶಯದ ಹಿನ್ನೀರು ಅಥಣಿ ತಾಲ್ಲೂಕಿನ ಸವದಿ ಹಳ್ಳಿ ಮತ್ತು ಜಮಖಂಡಿ ತಾಲ್ಲೂಕಿನ ಮಾಕನೂರ ಹಳ್ಳಿಯವರೆಗೆ ವ್ಯಾಪಿಸಿದೆ.

ಉ) ಸದ್ಯದಲ್ಲೇ ಸಮರ್ಪಿಸಲು ಉದ್ದೇಶಿಸಲಾಗಿದೆ.

ಊ) ಮೇಲಿನಂತೆ,

(626) ಶ್ರೀ ರೇಣುಕಾಚಾರ್ಯ ಎಂ.ಪಿ:– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾಳಿ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;